45.	ಅರೆಕಾ-ಡಿ-ಹಸ್ಕರ್	3	4	27750	60000
46.	ಸೋಲಾರ್ ಡ್ರೈಯರ್	1	1	11025	65000
ಒಟ್ಟು		282	363	–	–

158 ಶ್ರೀ ನರಸಿಂಹ ನಾಯಕ (ರಾಜುಗೌಡ)

ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಅಂಗನವಾಡಿ ಕಾರ್ಯಕರ್ತೆಯರಾಗಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರು ಗೌರವ ಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುತ್ತಾರೆ. ದಿನಾಂಕ: 7-12-2006ರ ಮಾನ್ಯ ಸರ್ವೋಚ್ಚನ್ಯಾಯಾಲಯದ ಆದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಸರ್ಕಾರಿ ನೌಕರರಲ್ಲವೆಂದು ಆದೇಶಿಸಿರುತ್ತದೆ. ಆದ್ದರಿಂದ ಇವರನ್ನು ಖಾಯಂ ಗೊಳಿಸಲು ಅವಕಾಶವಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈಗ ಯಾವ ಹಂತದಲ್ಲಿದೆ?

ಉದ್ಭವಿಸುವುದಿಲ್ಲ.

2 ಶ್ರೀ ಪಾಟೀಲ್ ಎ.ಎಸ್.

ಅ. ಕಳೆದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವುದು ನಿಜವೇ? ಈ ಕುರಿತು ತನಿಖೆ ನಡೆಸಲಾಗಿದೆಯೇ?

ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವುದು ನಿಜವಲ್ಲ. ಪಿಕಾರ್ಡ್ ಬ್ಯಾಂಕ್ ನಿ., ಶಿಗ್ಗಾವಿಯಲ್ಲಿ 31 ಪ್ರಕರಣಗಳಲ್ಲಿ ರೂ.3.20 ಲಕ್ಷಗಳ ಹಾಗೂ ಪಿಕಾರ್ಡ್ ಬ್ಯಾಂಕ್ ನಿ., ಚಿಕ್ಕೋಡಿಯಲ್ಲಿ 135 ಪ್ರಕರಣಗಳಲ್ಲಿ ರೂ.73.97 ಲಕ್ಷಗಳ ಹಣ ದುರುಪಯೋಗವಾಗಿರುತ್ತದೆ. ಈ ಕುರಿತು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳ ಮೂಲಕ ತನಿಖೆ ಮಾಡಿಸಲಾಗಿದೆ.

ಆ. ಹಾಗಿದ್ದಲ್ಲಿ, ಸದರಿ ಹಣ ದುರುಪಯೋಗ ಆಗಿರುವ ತನಿಖೆ ಯಾವ ಸ್ವರೂಪದ್ದು? ಹಗರಣದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಬ್ಯಾಂಕುಗಳು ಮತ್ತು ಸಂಘಗಳು ಭಾಗಿಯಾಗಿವೆ?

ಮಹಾಲೇಖಪಾಲರ ವಿಶೇಷ ತಂಡವು ಸರ್ಕಾರದ ಸಾಲ ಮನ್ನಾ ಯೋಜನೆಯಡಿ 10 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು, ಸದರಿ ಬ್ಯಾಂಕುಗಳಿಗೆ

ಸಂಯೋಜಿಸಲ್ಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹಾಗೂ 13 ಜಿಲ್ಲೆಗಳಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತದೆ.

ವರದಿಯ ಪ್ರಕಾರ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಯಾವುದೇ ಹಣ ದುರುಪಯೋಗವಾಗಿರುವುದು ಕಂಡುಬಂದಿರುವುದಿಲ್ಲ. ಆದರೆ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಪಿಕಾರ್ಡ್ ಬ್ಯಾಂಕ್ ನಿ., ಶಿಗ್ಗಾವಿಯಲ್ಲಿ 31 ಪ್ರಕರಣಗಳಲ್ಲಿ ರೂ.3.20 ಲಕ್ಷಗಳ ಹಾಗೂ ಪಿಕಾರ್ಡ್ ಬ್ಯಾಂಕ್ ನಿ., ಚಿಕ್ಕೋಡಿಯಲ್ಲಿ 135 ಪ್ರಕರಣಗಳಲ್ಲಿ ರೂ.73.97 ಲಕ್ಷಗಳ ಹಣ ದುರುಪಯೋಗವಾಗಿರುವುದನ್ನು ವರದಿಸಿರುತ್ತಾರೆ.

ಇ. ಈ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ ಎಷ್ಟು? (ಹೆಸರಿನೊಂದಿಗೆ ವಿವರ ನೀಡುವುದು)

ಪಿಕಾರ್ಡ್ ಬ್ಯಾಂಕ್ ನಿ., ಶಿಗ್ಗಾವಿ – ಶ್ರೀ ಎಸ್.ಎಸ್.ಗೆಜ್ಜೆ, ವ್ಯವಸ್ಥಾಪಕರು

ಪಿಕಾರ್ಡ್ ಬ್ಯಾಂಕ್ ನಿ., ಚಿಕ್ಕೋಡಿ – ಶ್ರೀ ಉದಗಾವಿ ಎ.ಟಿ., ಪ್ರಭಾರ ವ್ಯವಸ್ಥಾಪಕರು

ಈ. ಹಣ ದುರುಪಯೋಗ ಮಾಡಿಕೊಂಡ ಅಧಿಕಾರಿ/ ನೌಕರರ ಮೇಲೆ ಕೈಗೊಂಡ ಕ್ರಮವೇನು? ದುರುಪಯೋಗವಾಗಿರುವ ಹಣ ವಸೂಲಾತಿಗೆ ಯಾವ ಕ್ರಮಕೈಗೊಳ್ಳಲಾಗಿದೆ?

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಸದರಿ ವ್ಯವಸ್ಥಾಪಕರನ್ನು ವಿಚಾರಣೆಗೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿರುತ್ತದೆ. ದುರುಪಯೋಗವಾಗಿರುವ ಮೊತ್ತವನ್ನು ದಿನಾಂಕ: 13.01.2009 ರಂದು ಸರ್ಕಾರಕ್ಕೆ ಮರುಪಾವತಿಸಲಾಗಿದೆ.

165 ಶ್ರೀ ಶಿವಲಿಂಗೇಗೌಡ ಕೆ.ಎಂ.

ಕೃಷಿ ಸಚಿವರು

ಅ) ರಾಜ್ಯದಲ್ಲಿ ವಿವಿಧ ಹೈಬ್ರೀಡ್ ಬಿತ್ತನೆಬೀಜಗಳನ್ನು ಒದಗಿಸುವ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ ನೀಡುವ ದರವೆಷ್ಟು (ಹೈಬ್ರೀಡ್ ವಾರು ಮಾಹಿತಿ ನೀಡುವುದು);

ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಬೀಜೋತ್ಪಾದಕ/ವಿತರಕ ಸಂಸ್ಥೆಗಳಿಂದ ರೈತರಿಗೆ ಒದಗಿಸುವ ಹೈಬ್ರೀಡ್ ಬಿತ್ತನೆ ಬೀಜಗಳ ಪ್ರತಿ ಕ್ವಿಂಟಾಲ್ ದರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಸೂರ್ಯಕಾಂತಿ ಹೈಬ್ರೀಡ್ ತಳಿಗಳನ್ನು ಬೆಳೆದ ರೈತರಿಗೆ ಕಂಪನಿಯು ಕ್ವಿಂಟಾಲ್‌ಗೆ ನೀಡುವ ದರವೆಷ್ಟು;

ಸೂರ್ಯಕಾಂತಿ ಹೈಬ್ರೀಡ್ ತಳಿಗಳನ್ನು ಬೆಳೆದ ರೈತರಿಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ನೀಡಲಾಗುವ ಪ್ರತಿ ಕ್ವಿಂಟಾಲ್ ದರದ ವಿವರ ಕೆಳಕಂಡಂತಿದೆ: